# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ
## ಸಿ.ಸಿ.1947/2023

| | | |
|---|---|---|
| ಸಾಕ್ಷಿದಾರರ ಹೆಸರು | : ಸೋಮೆಗೌಡ ಪಿ.ಪಿ. | ಪ್ರಾಸಾ-13 |
| ತಂದೆಯ ಹೆಸರು | : ಪರ್ವತೇಗೌಡ | ಚಾಸಾ-15 |
| ವಯಸ್ಸು | : 55 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಸಿ.ಪಿ.ಐ. | ದಿನಾಂಕಃ06.02.2026. |
| ವಾಸಸ್ಥಳ | : ಆಲ್ದೂರು ವೃತ್ತ. | |

**:ಮುಖ್ಯ ವಿಚಾರಣೆಃ ಪ್ರಾಾಜ್ಞ್ಯಾಸ.ಸ.ಅ. ರವರಿಂದ:**

ನಾನು 10.11.2022 ರಿಂದ 15.01.2025 ರವರೆಗೂ ಮೂಡಿಗೆರೆ ವೃತ್ತದ ಸಿ.ಪಿ.ಐ. ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ:18.08.2023 ರಂದು ಪ್ರಕರಣದ ಕಡತವನ್ನು ಚಾಸಾ-18 ರವರಿಂದ ಸ್ವೀಕರಿಸಿಕೊಂಡು, ತನಿಖೆ ಮುಂದುವರೆಸಿ, ಅದೇ ದಿನ ಮೃತ ಪಟ್ಟಂತಹ ಶ್ರೀಮತಿ ಪೂಜಾ ಹಿರೇಮಟ್ ಮತ್ತು ನಿರಂಜನ್ ಹಿರೇಮಟ್ ರವರ ಮೃತ ದೇಹವನ್ನು ಮೂಡಿಗೆರೆಯ MGM ಆಸ್ಪತ್ರೆಯ ಶವಗಾರದಲ್ಲಿದ್ದು, ಶವತನಿಖೆ ಸಂಬಂಧ ಚಾಸಾ-17 ರವರನ್ನು ಕರೆದುಕೊಂಡು ಆಸ್ಪತ್ರೆಯ ಶವಾಗಾರದ ಬಳಿ ಭೇಟಿ ನೀಡಿ ಎರಡು ಶವಗಳು ಇರುವುದರಿಂದ ಒಂದು ಮೃತ ದೇಹದ ಪರೀಕ್ಷೆಯನ್ನು ಕೈಗೊಳ್ಳಲು ಚಾಸಾ-18 ರವರಿಗೆ ಸೂಳಿಸಿದ್ದು, ಒಂದು ಮೃತ ದೇಹದ ತನಿಖೆಯನ್ನು ನಾನು ಚಾಸಾ-2 ರಿಂದ 4 ರವರ ಸಮಕ್ಷಮ ರಾ.9.00 ರಿಂದ 9.30 ರವರೆಗೂ ಶವ ತನಿಖೆಯನ್ನು ನಡೆಸಿರುತ್ತೇನೆ. ಶವ ತನಿಖೆ ಸಮಯದಲ್ಲಿ ಹಾಜರಿದ್ದ ಮೃತ ಪೂಜಾ ರವರ ತಾಯಿಯಾದ ಚಾಸಾ-6 ರವರ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ. ಇತರೆ ಸಾಕ್ಷಿದಾರರು ಯಾರು ದೊರೆತಿಲ್ಲದ ಕಾರಣ ಚಾಸಾ-6 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಮೃತ ಪೂಜಾ ಹಿರೇಮಟ್ ರವರ ಮರಣೋತ್ತರ ಪರೀಕ್ಷೆಯನ್ನು ನೀಡುವಂತೆ ಚಾಸಾ-15 ರವರಿಗೆ ಮನವಿಯನ್ನು ನೀಡಿರುತ್ತೇನೆ. ಮೃತ ಪೂಜಾ ರವರ ಮರಣೋತ್ತರ ಪರೀಕ್ಷೆಯ ನಂತರ ಸದರಿಯವರ ಮೃತ ದೇಹವನ್ನು ಅವರ ಕುಟುಂಬಸ್ಥರಿಗೆ ಅಂತ್ಯಕ್ರಿಯೆಯನ್ನು ನೆರವೇರಿಸಲು ಹಸ್ತಾಂತರಿಸಿರುತ್ತೇನೆ.

ದಿ.13.08.2023 ರಂದು ಚಾಸಾ-2 ರವರ ಸಮಕ್ಷಮ ಚಾಸಾ-2 ರವರು ಘಟನಾ ಸ್ಥಳವನ್ನು ತೋರಿಸಿದ ಮೇರೆಗೆ ಚಾಸಾ-9 ಮತ್ತು 10 ರವರ ಸಮಕ್ಷಮ ಬೆ.10.00 ರಿಂದ 10.45 ರವರೆಗೂ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಸಮಯದಲ್ಲಿ ಫೋಟೋ ಮತ್ತು ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ಅದೇ ದಿನ ಚಾಸಾ-2 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಅದೇ ದಿನ ಈ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿದಾರರುಗಳಾದ ಚಾಸಾ-13 ಮತ್ತು 14 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಈ ಹಿಂದೆ ಅಮಾನತುಪಡಿಸಿಕೊಂಡಿದ್ದ ವಾಹನವನ್ನು ಠಾಣೆಯ ಆವರಣದಲ್ಲಿ ನಿಲ್ಲಿಸಿದ್ದು ಸದರಿ ದಿನ ಚಾಸಾ-1 ರವರು ಚಾಸಾ-2 ಮತ್ತು 3 ರವರ ಸಮಕ್ಷಮ KA-05-NE-9872 ಮಾರುತಿ ಸ್ವಿಫ್ಟ್ ಕಾರನ್ನು

ಗುರುತಿಸಿದ್ದು, ಸದರಿ ವಾಹನವನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಮ.12.15 ರಿಂದ 1.00 ರವರೆಗೂ ಪಂಚನಾಮೆಯನ್ನು ಜರುಗಿಸಿ, ಪಂಚರ ಸಮಕ್ಷಮ ಅಮಾನತುಪಡಿಸಿಕೊಂಡಿರುತ್ತೇನೆ. ಅದೇ ದಿನ ಚಂದ್ರಶೇಖರ್, ಸಂಚಾರಿ ನಿಯಂತ್ರಕ ರವರು KA-40-F-0506 ರ ಸರ್ಕಾರಿ ಬಸ್ ನ್ನು ಗುರುತಿಸಿದ್ದು, ಸದರಿ ವಾಹನವನ್ನು ಚಾಸಾ-11 ಮತ್ತು 12 ರವರ ಸಮಕ್ಷಮ ಸ.7.00 ರಿಂದ 7.45 ರವರೆಗೂ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡಿರುತ್ತೇನೆ. ಸದರಿ ವಾಹನವನ್ನು ಮೂಡಿಗೆರೆಯ ಠಾಣಾ ಪಿ.ಎಫ್ ನಂಬರ್ 122/2023 ರಲ್ಲಿ ನೊಂದಾಯಿಸಿರುತ್ತೇನೆ.

ಅದೇ ದಿನ ಚಾಸಾ-3 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ.14.08.2023 ರಂದು ಸದರಿ ಪ್ರಕರಣದಲ್ಲಿ ಅಪಘಾತಕ್ಕೊಳಗಾದ ಬಸ್ ನ ವರದಿಯನ್ನು ನೀಡುವಂತೆ ಚಾಸಾ-16 ರವರಿಗೆ ಮನವಿಯನ್ನು ನೀಡಿರುತ್ತೇನೆ. ದಿ.15.08.2023 ರಂದು ಸಹಾಯಕ ಸಂಚಾರಿ ನಿಯಂತ್ರಕರು ಆರೋಪಿಯನ್ನು ಠಾಣೆಗೆ ತಂದು ಹಾಜರುಪಡಿಸಿರುತ್ತಾರೆ ಮತ್ತು ಬಸ್ ನ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ. ನಂತರ ಆರೋಪಿಯವರಿಂದ ಚಾಲನ ಪರವಾನಿಗೆ, ಆರ್.ಸಿ, ಇನ್ಸ್ ಸ್ಯೂರೆನ್ಸ್, ಎಫ್.ಸಿ, ನಿರ್ವಾಹಕರ ಮಾರ್ಗ ಪತ್ರ, ಕರ್ತವ್ಯ ದೃಢೀಕರ ಪತ್ರ ಮತ್ತು ಇತರೆ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಆರೋಪಿಗೆ Cr.P.C ಕಲಂ 41 ಎ ರಡಿಯಲ್ಲಿ ನೋಟೀಸನ್ನು ಜಾರಿ ಮಾಡಿರುತ್ತೇನೆ. ಅದೇ ದಿನ ನಷ್ಟ ಭರ್ತಿ ಪರಿಹಾರ ಪ್ರತಿಯನ್ನು ಪಡೆದು ಜಗನ್ನಾತ್ ರವರಿಗೆ ಬಸ್ ನ್ನು ಬಿಡುಗಡೆ ಮಾಡಿರುತ್ತೇನೆ. ದಿ.07.09.2023 ರಂದು ಅಪಘಾತಕ್ಕೀಡಾದ KA-05-NE-9872 ಸ್ವಿಫ್ಟ್ ಕಾರನ್ನು ಪರಿಶೀಲಿಸಿ ವರದಿ ನೀಡುವಂತೆ ಕೋರಿ, ಚಾಸಾ-16 ರವರಿಗೆ ಮನವಿಯನ್ನು ನೀಡಿರುತ್ತೇನೆ. ಅದೇ ದಿನ ಚಾಸಾ-5 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸದರಿಯವರು ಅಪಘಾತಕ್ಕೀಡಾದ ಕಾರಿನ ದಾಖಲಾತಿಯನ್ನು ಹಾಜರು ಪಡಿಸಿರುತ್ತಾರೆ. ನಂತರ GPA ಆಧಾರದ ಮೇಲೆ ಚಾಸಾ-5 ರವರಿಗೆ ಸದರಿ ಕಾರನ್ನು ಬಿಡುಗಡೆ ಮಾಡಿರುತ್ತೇನೆ.

ದಿ.04.10.2023 ರಂದು ಚಾಸಾ-15 ರವರಿಂದ ಚಾಸಾ-1 ರವರ ಗಾಯದ ಪ್ರಮಾಣ ಪತ್ರ ಮತ್ತು ಮೃತರ ಮರಣೋತ್ತ್ರರ ಪರೀಕ್ಷಾ ವರದಿಯನ್ನು ಸ್ವೀಕರಿಸಿಕೊಂಡಿರುತ್ತೇನೆ. ದಿ.18.10.2023 ರಂದು ಅಪಘಾತಕ್ಕೀಡಾದಾ ಎರಡೂ ವಾಹನಗಳ IMV ವರದಿಯನ್ನು ಚಾಸಾ-16 ರವರಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-1 ರವರನ್ನು ಠಾಣೆಗೆ ಕರೆದು ಅವರ ಮುಂದುವರೆದ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ತನಿಖೆ ಕಾಲದಲ್ಲಿ ಫೋಟೋಗಳನ್ನು ತೆಗೆದ ಚಾಸಾ-17 ರವರಿಂದ 65 ಬಿ ದೃಢೀಕೃತ ಪ್ರತಿಯನ್ನು ಪಡೆದುಕೊಂಡಿರುತ್ತೇನೆ. ಇದುವರೆಗಿನ ತನಿಖೆಯಲ್ಲಿ ಆರೋಪಿಗಳ ವಿರುದ್ಧ ಆರೋಪವು ಸಾಬೀತಾದ ಕಾರಣ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ.

ಸಾಕ್ಷಿಯು ನಿಪಿ-5, 8, 9, 14, 18 ಮತ್ತು 20 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-5(ಡಿ), 8(ಡಿ), 9(ಸಿ), 14(ಸಿ), 18(ಸಿ) ಮತ್ತು 20(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-2, 3, 15, 6, 7, 10 ಮತ್ತು 11 ರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು ದಿ.07.09.2023 ರಂದು ಜಗನ್ನಾಥ್ ಎಂಬುವವರಿಂದ ಪಡೆದುಕೊಂಡಂತಹ ನಷ್ಟ ಭರ್ತಿ ಪರಿಹಾರ ಪ್ರತಿಯನ್ನು ನೋಡಿ ಗುರುತಿಸಿದ್ದು, ಸದರಿ ಪ್ರತಿಯನ್ನು

ನಿಪಿ-26 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-26(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಚಾಸಾ-1 ರವರಿಂದ ಪಡೆದುಕೊಂಡ ವಿಶೇಷ ಅಧಿಕಾರ ಪತ್ರವನ್ನು ನಿಪಿ-27 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-27(ಎ) ಎಂದು ಗುರುತಿಸಲಾಯಿತು. ಚಾಸಾ-5 ರವರಿಂದ ಪಡೆದುಕೊಂಡಂತಹ ನಷ್ಟ ಭರ್ತಿ ಪರಿಹಾರ ಪ್ರತಿಯನ್ನು ನಿಪಿ-28 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-28(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.14.08.2023 ರಂದು ಚಾಸಾ-16 ರವರಿಂದ ಪಡೆದುಕೊಂಡ IMV ವರದಿಯನ್ನು ನಿಪಿ-29 ಮತ್ತು 30, ಸಾಕ್ಷಿಯ ಸಹಿಯನ್ನು ನಿಪಿ-29(ಎ) ಮತ್ತು 30(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ</u>**

ನಾನು ಅಮಾನತುಪಡಿಸಿಕೊಂಡ ಬಸ್ ನಂ. KA-40-F-0506 ಆಗಿರುತ್ತದೆ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ಕಾಣುತ್ತಿರುವ ಬಸ್ ನ್ನು ನೀವು ಅಮಾನತುಪಡಿಸಿಕೊಂಡಿರುತ್ತೀರ ಎಂದರೆ ಹೌದು ಎಂದು ಗುರುತಿಸಿದ ಮೇರೆಗೆ ಸದರಿ ಫೋಟೋವನ್ನು ನಿಡಿ-3 ಎಂದು ಗುರುತಿಸಲಾಯಿತು. ಅದೆ ರೀತಿ ಸದರಿ ಬಸ್ ನ ಮಾರ್ಗವು ಆ ದಿನ ಮೂಡಿಗೆರೆಯಿಂದ ಸಕಲೇಶಪುರ ಮಾರ್ಗವಾಗಿ ಹಾಕಲಾಗಿತ್ತು ಎಂದರೆ ಸರಿ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಸದರಿ ಬಸ್ ಇದೆ ಎಂದು ಕೇಳಲಾಗಿ ಸಾಕ್ಷಿಯು ಗುರುತಿಸಿದ ಮೇರೆಗೆ ಸದರಿ ಗ ನಿಡಿ-4 ಎಂದು ಗುರುತಿಸಲಾಯಿತು. ಪ್ರಸ್ತುತ ಪ್ರಕರಣ ದಾಖಲಾಗಿರುವ ಅಪಘಾತದ ಕುರಿತು ದಿನಪತ್ರಿಕೆಯಲ್ಲಿ ವರದಿಯಾಗಿತ್ತು ಎಂದರೆ ಸರಿ. ನಿಡಿ-2 ರಲ್ಲಿ ವರದಿಯಾಗಿರುವಂತ ಅಪಘಾತ ಸಂಭವಿಸಿದ ಸಮಯದಲ್ಲಿ ಅಪಘಾತಕ್ಕೀಡಾದ ಸರ್ಕಾರಿ ಬಸ್ ರಸ್ತೆಯ ಎಡಬದಿಯ ಕೆಳಭಾಗದಲ್ಲಿ ಇತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಫೋಟೋವನ್ನು ಪತ್ರಕರ್ತರು ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ-3 ರ ಪ್ರಕಾರ ಅಪಘಾತವನ್ನು ನಿಯಂತ್ರಿಸಲು ಬಸ್ ನ ಚಾಲಕನು ಪ್ರಯತ್ನಿಸಿರುವುದು ಕಂಡುಬರುತ್ತದೆ ಎಂದರೆ ಸಾಕ್ಷಿಯು ಸದರಿ ಗುರುತು ಬಸ್ ನ ಟೈರ್ ಗುರುತಾಗಿರುತ್ತದೆ ಎಂದು ನುಡಿಯುತ್ತಾರೆ.

ನಿಡಿ-3 ರಲ್ಲಿ ಸರ್ಕಾರಿ ಬಸ್ ರಸ್ತೆಯ ಎಡಬದಿಯಲ್ಲಿ ನಿಂತಿರುವುದು ಕಂಡುಬಂದಿರುತ್ತದೆ ಎಂದರೆ ಸರಿ. ಮೂಡಿಗೆರೆಯಿಂದ ಬೇಲೂರಿಗೆ ಹೋಗುವ ರಸ್ತೆಯಲ್ಲಿ ಮುಂದೆ ಹೋಗುತ್ತಿರುವ ವಾಹನವನ್ನು overtake ಮಾಡಿದ್ದಲ್ಲಿ ಈ ರೀತಿಯಾದ ಅಪಘಾತವು ಆಗುವ ಸಂಭವವಿರುತ್ತದೆ ಎಂದರೆ ಸರಿ. ಅಪಘಾತ ಸಂಭವಿಸಿದ ದಿನ ನಾನು ಕುದ್ದು ಸ್ಥಳಕ್ಕೆ ಹೋಗಿರುವುದಿಲ್ಲ. ಚಾಸಾ-14 ರವರು ಸ್ಥಳಕ್ಕೆ ಹೋಗಿರುತ್ತಾರೆ. ಪಂಚರ ಹೇಳಿಕೆಯನ್ನು ಪಡೆದುಕೊಳ್ಳಲು ಅವರಿಗೆ ನೋಟೀಸನ್ನು ಜಾರಿ ಮಾಡಿದ ಸಮಯ ನನಗೆ ನೆನಪಿರುವುದಿಲ್ಲ. ಪಂಚರನ್ನು ಮೂಡಿಗೆರೆಯ ಟೌನ್ ನಿಂದ ಕರೆದುಕೊಂಡು ಹೋಗಿರುತ್ತೇವೆ. ಸ್ಥಳ ಪಂಚನಾಮೆಯ ಪಂಚರಿಗೆ ಬೆ.11.45 ರ ಸಮಯಕ್ಕೆ ನೋಟೀಸನ್ನು ಜಾರಿ ಮಾಡಿರುತ್ತೇನೆ. ಸ್ಥಳ ಪಂಚನಾಮೆಗೆ ಬೆ.9.30 ರ ಸಮಯಕ್ಕೆ ಹೊರಟಿರುತ್ತೇವೆ. ಠಾಣೆಯಿಂದ ಘಟನಾ ಸ್ಥಳವು 4 ಕೀ.ಮೀ. ಅಂತರವಿರುತ್ತದೆ. ಸ್ಥಳ ಪಂಚನಾಮೆಗೆ ಇಲಾಖಾ ವಾಹನದಲ್ಲಿಯೇ ಹೊರಟಿರುತ್ತೇವೆ. ಘಟನಾ ಸ್ಥಳಕ್ಕೆ 9.45 ರಷ್ಟರಲ್ಲಿ ತಲುಪಿರುತ್ತೇವೆ. ಸ್ಥಳ ಪಂಚನಾಮೆಗೆ ಹಾಜರಿದ್ದ ಪಂಚರನ್ನು ಯಾವುದರ ಮುಖಾಂತರ

ಕರೆದುಕೊಂಡು ಹೋಗಿರುತ್ತೇವೆ ಎಂದು ನೆನಪಾಗುತ್ತಿಲ್ಲ. ನಿಪಿ-8 ನ್ನು ಠಾಣೆಯಲ್ಲಿಯೇ ತಯಾರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-8 ನ್ನು ಚಾಸಾ-17 ರವರು ಬರೆದಿರುತ್ತಾರೆ.

ನಿಪಿ-8 ರಲ್ಲಿ ನಮೂದಿಸಿರುವ ಚೆಕ್ಕುಬಂದಿಯನ್ನು ಯಾರು ತಿಳಿಸಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ. ಚೆಕ್ಕುಬಂದಿಯ ಮಾಹಿತಿಯನ್ನು ನೀಡಿದ ಸ್ಥಳೀಯ ವ್ಯಕ್ತಿಯ ಸಹಿಯನ್ನು ನಿಪಿ-8 ಕ್ಕೆ ಪಡೆದುಕೊಂಡಿರುವುದಿಲ್ಲ. ನಿಪಿ-10 ಮತ್ತು 11 ನ್ನು ಚಾಸಾ-17 ರವರು ಇಲಾಖಾ ಕ್ಯಾಮೆರಾದಿಂದ ತೆಗೆದಿರುತ್ತಾರೆ. ಇಲಾಖಾ ಕ್ಯಾಮೆರಾವು ಡಿಜಿಟಲ್ ಎಂದರೆ ಸರಿ. ಆದ ಕಾರಣ ಫೋಟೋದ ಮೇಲೆ ದಿನಾಂಕ ಮತ್ತು ಸಮಯ ನಮೂದಾಗುತ್ತದೆ ಎಂದರೆ ಸಾಕ್ಷಿಯು ಕೆಲವು ಸಮಯದಲ್ಲಿ ನಮೂದಾಗುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-10 ಮತ್ತು 11 ರ ಪ್ರಕಾರ ಚಾಸಾ-2 ರವರು ರಸ್ತೆಯ ಅಪಘಾತವು ಜನ್ನಾಪುರದಿಂದ ಮೂಡಿಗೆರೆಗೆ ಹೋಗುವ ರಸ್ತೆಯ ಎಡಬದಿಯಲ್ಲಿ ನಡೆದಿರುತ್ತದೆ ಎಂದು ತೋರಿಸಿರುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಎಲ್ಲಾ ವಾಹನಗಳು ರಸ್ತೆಯ ಎಡಭಾಗದಲ್ಲಿ ಸಂಚರಿಸಬೇಕು ಎಂದರೆ ಸರಿ. ಅಪಘಾತವು ಆರೋಪಿಯ ತಪ್ಪಿನಿಂದಿಲ್ಲ, ಚಾಸಾ-1 ರವರ ತಪ್ಪಿನಿಂದ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಚಾಸಾ-1 ರವರು ಪರಿಹಾರವನ್ನು ಕೋರಿ ಅರ್ಜಿ ಸಲ್ಲಿಸಿರುವ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-5 ರವರಿಗೆ ಹೇಳಿಕೆಯನ್ನು ನೀಡಲು ದೂರವಾಣಿ ಕರೆ ಮಾಡಿ ತಿಳಿಸಿರುತ್ತೇನೆ ಎಂದರೆ ಸರಿ. ಸದರಿ ದಿನಾಂಕ ನೆನಪಿರುವುದಿಲ್ಲ.

ಸದರಿಯವರಿಂದ ಪಡೆದುಕೊಂಡ ದಾಖಾಲಾತಿಗಳನ್ನು ಪ್ರಸ್ತುತ ಪ್ರಕರಣಕ್ಕಾಗಿ ನಾನೇ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-16 ರವರಿಂದ ಪಡೆದುಕೊಂಡ ವರದಿಯಲ್ಲಿ ಅಪಘಾತಕ್ಕೀಡಾದ ವಾಹನಗಳ ತಾಂತ್ರಿಕ ದೋಶದ ಬಗ್ಗೆ ಪರಿಶೀಲಿಸಿರುತ್ತೇನೆ. ಸದರಿ ವರದಿಯ ಪ್ರಕಾರ ವಾಹನಗಳಲ್ಲಿ ತಾಂತ್ರಿಕ ದೋಶವಿರುವ ಬಗ್ಗೆ ಮಾಹಿತಿ ಇರುವುದಿಲ್ಲ. ಜನ್ನಾಪುರದಿಂದ ಮೂಡಿಗೆರೆಗೆ ಬರುವ ರಸ್ತೆಯ ಮುದ್ರೆ ಮನೆಯ ಹತ್ತಿರ ಹಂಪ್ಸ್ ಇರುತ್ತವೆ ಎಂದರೆ ಸರಿಯಲ್ಲ. ಸದರಿ ರಸ್ತೆಯು ಉಬ್ಬಾಗಿರುವ ಕಾರಣ ವಾಹನಗಳು ವೇಗವಾಗಿ ಬರಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ರಸ್ತೆಯು ಉಬ್ಬಾಗಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿನ ನನ್ನ ಪರವಾಗಿ ಗುರುತಿಸಲಾದ ದಾಖಲಾತಿಗಳನ್ನುಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಸರ್ಕಾರಿ ಬಸ್ ಗಳಿಗೆ ವೇಗ ನಿಯಂತ್ರಣವನ್ನು ಅಸವಡಿಸಿರುತ್ತಾರೆ ಎಂದರೆ ಸರಿಯಲ್ಲ. ಅದರ ಬಗ್ಗೆ ಮಾಹಿತಿ ಇದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳು ವಿರುದ್ಧ ಯಾವುದೇ ಆರೋಪವೂ ಸಾಬೀತಾಗದಿದ್ದರು ಸುಳ್ಳು ದೋ.ಪ.ಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

<u>**ಮರು ವಿಚಾರಣೆ ಇಲ್ಲ**</u>

(ತೆರೆದ ನ್ಯಾಯಾಲಯದಲ್ಲಿ ನನ್ನ  ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಪ್ರಧಾನ ಸಿವಿಲ್  ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.